


# ANTI-TERRORISM DAY
# 21TH MAY 2022




ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು.
ರಾಷ್ಟ್ರೀಯ ಸೇವಾ ಯೋಜನಾ ಘಟಕದ ವತಿಯಿಂದ
"ಭಯೋತ್ಪಾದನಾ ವಿರೋಧಿ ದಿನ"
ದಿನಾಂಕ: 21-05-2022
ಸಮಯ: 12.15 ಗಂಟೆಗೆ

















**“ಧರ್ಮದ ಮೇಲಿನ ದುರಭಿಮಾನವೇ ಭಯೋತ್ಪಾದನೆಗೆ ಕಾರಣ”**

- ಡಾ.ಎಸ್.ಮರೀಗೌಡ

ಧರ್ಮದ ಮೇಲಿನ ಅತಿಯಾದ ದುರಭಿಮಾನದಿಂದಾಗಿ ಕೆಲವರು ಭಯೋತ್ಪಾದಕರಾಗುತ್ತಿದ್ದಾರೆ. ಇನ್ನು ಕೆಲವರು ಸಮಾಜದಲ್ಲಿರುವ ಅಸಮಾನತೆಯ ವಿರುದ್ಧ ಹೋರಾಟ ಮಾಡಲು ಭಯೋತ್ಪಾದಕರಾಗುತ್ತಿದ್ದಾರೆ ಎಂದು ವಿದ್ಯಾವರ್ಧಕ ಪ್ರ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯರಾದ ಡಾ.ಎಸ್.ಮರೀಗೌಡ ಅಭಿಪ್ರಾಯ ಪಟ್ಟರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾ.ಸೇ.ಯೋ ಘಟಕದ ವತಿಯಿಂದ ದಿನಾಂಕ:೨೧.೦೫.೨೦೨೨ರಂದು ಆಯೋಜಿಸಿದ್ದ **“ಭಯೋತ್ಪಾದನಾ ವಿರೋಧಿ ದಿನ”** ಕಾರ್ಯಕ್ರದಲ್ಲಿ ಅಧ್ಯಕ್ಷತೆಯನ್ನು ವಹಿಸಿ ಅವರು ಮಾತನಾಡಿದರು. ಅಹಿಂಸೆ ಹಾಗೂ ಸಹನೆಗೆ ಹೆಸರಾದ ಯಾವುದೇ ರಾಷ್ಟ್ರದ ದೃಢವಿಶ್ವಾಸವಿರುವಂತಹ ಪ್ರಜೆಗಳೆಲ್ಲರೂ ಎಲ್ಲಾ ಬಗೆಯ ಭಯೋತ್ಪಾದನೆ ಮತ್ತು ಹಿಂಸೆಯನ್ನು ತ'ಮ್ಮೆಲ್ಲ ಶಕ್ತಿ ಸಾಮರ್ಥ್ಯದಿಂದ ಶ್ರದ್ಧಾಪೂರ್ವಕವಾಗಿ ಎದುರಿಸಿ ಸಮಾಜದಲ್ಲಿ ಶಾಂತಿ, ಸಾಮಾಜಿಕ ಸೌಹಾರ್ದತೆ ಮತ್ತು ಪರಸ್ಪರ ಅರಿವನ್ನು ಸಾಧಿಸಬೇಕಾಗುತ್ತದೆ. ಸಮಾಜದ ಸುವ್ಯವಸ್ಥೆಗೆ ಧಕ್ಕೆ ತರುವಂತಹ ಕೆಲಸವನ್ನು ಯಾರೂ, ಎಂದೂ ಮಾಡಬಾರದು. ವಿಪರ್ಯಾಸವೆಂದರೆ ಇಂತಹ ಉಗ್ರ ಕೃತ್ಯಗಳನ್ನು ವಿದ್ಯಾವಂತರಾದವರೇ ಮಾಡುತ್ತಿರುವುದು ನಾಚಿಕೆಗೇಡಿನ ಸಂಗತಿಯೇ ಸರಿ ಎಂದು ತಿಳಿಸಿದರು. ಇದೇ ವೇಳೆ ಖ್ಯಾತ ಲೇಖಕ ಪೂರ್ಣಚಂದ್ರ ತೇಜಸ್ವಿಯವರ “ಭಾರತದಲ್ಲಿರುವ

ಎಲ್ಲಾ ಮುಸ್ಲಿಮರೂ ಭಯೋತ್ಪಾದಕರಲ್ಲ ಆದರೆ ಭಯೋತ್ಪಾದಕೆರಲ್ಲರೂ ಮುಸ್ಲಿಮರು" ಎಂಬ ಹೇಳಿಕೆಯನ್ನು ಸ್ಮರಿಸಿದರು.

ರಾಜ್ಯಶಾಸ್ತ್ರ ವಿಭಾಗ ಮುಖ್ಯಸ್ಥರಾದ ಡಾ.ರಘು.ಬಿ.ಟಿ ನಿರೂಪಿಸಿದ ಕಾರ್ಯಕ್ರಮವನ್ನು ಕಾಲೇಜಿನ ರಾ.ಸೇ.ಯೋ ಘಟಕದ ಸಂಯೋಜನಾಧಿಕಾರಿ ಪ್ರೊ.ಸತೀಶ್.ಟಿ ಸ್ವಾಗತಿಸಿ, ಪ್ರೊ.ಮೋಹನ್ ಕುಮಾರ್.ಎನ್ ವಂದಿಸಿದ ಕಾರ್ಯಕ್ರಮದಲ್ಲಿ ರಾ.ಸೇ.ಯೋ ಸ್ವಯಂ ಸೇವ'ಕರು, ಅಧ್ಯಾಪಕರು ಹಾಗೂ ಅಧ್ಯಾಪಕೇತರರು ಭಾಗವಹಿಸಿ ಭಯೋತ್ಪಾದನೆ ವಿರುದ್ಧದ ಪ್ರಮಾಣ ವಚನವನ್ನು ಸಾಮೂಹಿಕವಾಗಿ ಸ್ವೀಕರಿಸಿದರು.








ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು.




ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು.
ರಾಷ್ಟ್ರೀಯ ಸೇವಾ ಯೋಜನಾ ಘಟಕದ ವತಿಯಿಂದ
“ಭಯೋತ್ಪಾದನಾ ವಿರೋಧಿ ದಿನ”
ದಿನಾಂಕ: 21-05-2022
ಸಮಯ: 12.15 ಗಂಟೆಗೆ